# 11

# ಇತರ ವಿಚಾರಗಳು (1)

## ಪಾಪ

ಅನುದಿನದ ನಡೆಯುವಿಕೆಯು ದೇವರೊಂದಿಗೆ ಕಾರ್ಯಮಾಡುವುದು, ದೇವರಿಗೆ ಅಂಟಿಕೊಂಡಿರುವುದು, ದೇವರ ಅರುಹನ್ನು ಹೊಂದಿಕೊಳ್ಳುವುದು, ದೇವರಿಗೆ ವಿಧೇಯನಾಗುವುದು, ಮತ್ತು ದೇವರನ್ನು ಮಹಿಮೆಪಡಿಸುವುದು ಆಗಿರುತ್ತದೆ. ಇದನ್ನು ಮಾಡುವದಕ್ಕೆ ಯಾವುದು ಆತಂಕಪಡಿಸುವುದು? ಪಾಪವು ಅಪರಾಧಿಯಾಗಿದೆ. ಇತರ ಎಲ್ಲಾ ತಪ್ಪುಗಳು ಪಾಪದ ಲಕ್ಷಣಗಳಾಗಿವೆ. ಪಾಪವು ದೇವರಿಗೆ ವಿರುದ್ಧವಾದದ್ದಾಗಿದೆ, ಆತನ ಪ್ರೀತಿಗೆ ವಿರುದ್ಧವಾದದ್ದಾಗಿದೆ, ಆತನ ಧರ್ಮಶಾಸ್ತ್ರಕ್ಕೆ ವಿರುದ್ಧವಾದದ್ದಾಗಿದೆ. ದೇವರು ಪಾಪವನ್ನು ದ್ವೇಷಿಸುತ್ತಾನೆ. ನಿಜವಾದ ಆತ್ಮಿಕತೆಯ ಮೂಲ ಲಕ್ಷಣವು ಪಾಪದ ಬಗ್ಗೆ ಅತಿಶಯವಾಗಿ ಎಚ್ಚರಿಕೆಯಿಂದಿರುವುದು. ಯೇಸುವು ಪಾಪಿಗಳನ್ನು ರಕ್ಷಿಸುವದಕ್ಕಾಗಿ ಬಂದನು. ನಮ್ಮ ಪಾಪಗಳು ದೇವರಿಂದ ನಮ್ಮನ್ನು ಬೇರೆ ಮಾಡುತ್ತದೆ. ಪಾಪದಲ್ಲಿ ಇರುವ ಜನರು ಸತ್ತವರಾಗಿದ್ದಾರೆ (ಎಫೆಸ 2:1). ಸತ್ತವರಿಗೆ ಚಿಕಿತ್ಸೆಯ ಅಗತ್ಯತೆಯಿರುವದಿಲ್ಲ; ಅವರಿಗೆ ಜೀವದ ಅಗತ್ಯತೆ ಇರುತ್ತದೆ. ಕ್ರೈಸ್ತತ್ವವು ಒಂದು ಸುವಾರ್ತೆಯಾಗಿದೆ (ತತ್ವಜ್ಞಾನಕ್ಕಿಂತ ಹೆಚ್ಚಿನದಾಗಿದೆ). ಕೇವಲ ಕ್ರೈಸ್ತತ್ವವು ಮಾತ್ರವೇ ನಮ್ಮ ನಿಜವಾದ ಸಮಸ್ಯೆಯೊಂದಿಗೆ - *ಪಾಪದೊಂದಿಗೆ* ವ್ಯವಹರಿಸುತ್ತದೆ! ಪಾಪವು ನೂರಕ್ಕೆ ನೂರರಷ್ಟು ನರಕ ದಂಡನೆಯಾಗಿದೆ. ಯೇಸುವು ನೂರಕ್ಕೆ ನೂರರಷ್ಟು ರಕ್ಷಕನಾಗಿದ್ದಾನೆ. "ಜಗತ್ತಿನೊಂದಿಗೆ ಏನು ತಪ್ಪಾಗಿದೆ?" ಎಂಬ ಪ್ರಶ್ನೆಯೊಂದಿಗೆ ತನ್ನ ಪ್ರತಿಯೊಂದು ಸಂಪಾದಕೀಯವನ್ನು ಮುಗಿಸುತ್ತಿದ್ದ *ಲಂಡನ್ ಟೈಮ್ಸ್‌ದ* ಬರಹಗಾರನಿಗೆ ಜೀ. ಕೆ. ಚೆಸ್ಟರ್‌ಟನ್ ಉತ್ತರವಾಗಿ ಚೆನ್ನಾಗಿ ಹೇಳಿದ್ದಾರೆ:

> ಪ್ರಿಯ ಸಂಪಾದಕನೇ:
> ಜಗತ್ತಿನೊಂದಿಗೆ ಏನು ತಪ್ಪಾಗಿದೆ? ನಾನು ಆಗಿದ್ದೇನೆ.
> ನಿಮ್ಮ ನಂಬಿಕೆಯ,
> ಜಿ. ಕೆ. ಚೆಸ್ಟರ್‌ಟನ್[1]

ಪಾಪದೊಂದಿಗೆ ಚಿಕಿತ್ಸೆಯು ಸೋತುಹೋಗುತ್ತದೆ. ಮನೋವಿಜ್ಞಾನವು ಆತ್ಮ, ಪಾಪ ಇಲ್ಲವೇ ರಕ್ಷಣೆಯ ಬಗ್ಗೆ ಮಾತನಾಡಲಾರದು. ಪಾಪವು ಇಂದು "ಹೊರಗೆ" ಇದೆ. ಬೈಬಲಿನ ಪ್ರಸಂಗದಂತೆ ಇಂದು ಯಾವುದೂ ಜನರನ್ನು ರೇಗಿಸುವದಿಲ್ಲ. ಪಾಪವನ್ನು ಖಂಡಿಸುವುದು ಈಗ ಕೇವಲ ಪಾಪವಾಗಿದೆ. "ಆದರೆ ನಾನು ಒಳ್ಳೇ ಮನುಷ್ಯನು, ಉತ್ತಮನು" ಎಂದು ಹೇಳುವದನ್ನು ಕೇಳಿದ್ದೇನೆ. *ಇಲ್ಲ!* ನೀನು ಪಾಪಿಯಾಗಿದ್ದೀ; ನೀನು ಮಾನಸಾಂತರ ಪಡತಕ್ಕದ್ದು.

ಚರ್ಚ್ ಬುಲೆಟನ್‌ಗಳಲ್ಲಿ ಪ್ರಸಾರ ಮಾಡಿದ ಈ ಕೆಳಗಿನ ಮುಖ್ಯಾಂಶಗಳಿಗಾಗಿ ಡೇವಿಡ್ ಪೆಡ್ಸೆನ್ ಅವರಿಗೆ ನಾವು ಕೃತಜ್ಞರಾಗಿದ್ದೇವೆ:

ಪಾಪದ ಬಗ್ಗೆ ಮೂರು ಸತ್ಯಗಳು

(1) ಪಾಪವು ಒಂದು ಸಾಲವಾಗಿದೆ (ಮತ್ತಾಯ 6:12-15).
(2) ಪಾಪವು ನಮ್ಮನ್ನು ದೂರಮಾಡುತ್ತದೆ (ಯೆಶಾಯ 59:1, 2; ರೋಮಾಪುರ 3:10, 23).
(3) ಪಾಪವು ನಮ್ಮನ್ನು ಸತ್ತವರೆಂದು ಘೋಷಿಸುತ್ತದೆ (ಎಫೆಸ 2:1).

ರಕ್ಷಣೆಯ ಬಗ್ಗೆ ಮೂರು ಸತ್ಯಗಳು

(1) ಯೇಸುವು ನಮ್ಮನ್ನು ವಿಮೋಚಿಸಿದನು (ಎಫೆಸ 2:13-15).
(2) ಯೇಸುವು ನಮ್ಮನ್ನು ಸಂಧಾನಪಡಿಸಿದನು (ಎಫೆಸ 2:16; 2 ಕೊರಿಂಥ 5:17-21).
(3) ಯೇಸುವು ನಮ್ಮನ್ನು ಹೊಸದಾಗಿ ಹುಟ್ಟುವಂತೆ ಮಾಡುತ್ತಾನೆ (ಯೋಹಾನ 3:3, 5, 7; 2 ಕೊರಿಂಥ 5:17; 1 ಪೇತ್ರ 1:18-25).

ನಮಗಿಂತ ಹೆಚ್ಚಾಗಿ ದೇವರು ಪಾಪದಿಂದ ತಿರಸ್ಕರಿಸಲ್ಪಟ್ಟಿದ್ದಾನೆ. ಪಾಪವನ್ನು ನಾವು ಅಳತೆಮಾಡುವ ಮಟ್ಟವು ದೇವರಾಗಿದ್ದಾನೆ - ಸಮಾಜವಲ್ಲ ಇಲ್ಲವೇ ಸ್ವಾರ್ಥವಲ್ಲ. ಯಾವುದೇ ಪಾಪದಲ್ಲಿ ಅತೀ ಕೆಟ್ಟ ಸಂಗತಿಯು ಅದು ದೇವರಿಗೆ ವಿರೋಧವಾಗಿ ಇರುವಂಥದ್ದು ಪ್ರತಿಯೊಂದು ಪಾಪವು ದುರಾಶೆಯ ಫಲವಾಗಿರುತ್ತದೆ (ಯಾಕೋಬ 1:12-15), ಅಂದರೆ, ಒಬ್ಬನ ಸ್ವಂತ ಹೃದಯದಲ್ಲಿ ಹೋಗುತ್ತಿರುವಂಥದ್ದಾಗಿದೆ. ದೇವರು ಮಾಡುವಂಥದ್ದೆಲ್ಲವೂ ಪಾಪಿಗಳೊಂದಿಗೆ ಎಂಬುದನ್ನು ಜ್ಞಾಪಿಸಿಕೊಳ್ಳಿರಿ "ಬಹಳವಾಗಿ" ಪಾಪ ಮಾಡದಿರುವದಕ್ಕೆ ನಮ್ಮಲ್ಲಿ ಹೆಚ್ಚಾದವರು ತೃಪ್ತರಾಗಿರುತ್ತೇವೆ. ಯೋಹಾನನು ಪಾಪಮಾಡಲಿಕ್ಕೆ ಬಯಸಲೇ ಇಲ್ಲ (1 ಯೋಹಾನ 2:1, 2). ನಾನು ಹೆಚ್ಚುಕಾಲ ಜೀವಿಸಿದಂತೆ, ಪರಲೋಕವು ನನಗೆ ವಾಸ್ತವವಾದದ್ದಾಗುತ್ತದೆ. ಆ ಅದ್ಭುತಕರವಾದ ಸ್ಥಳದಲ್ಲಿ, *ಪಾಪವಿರುವದಿಲ್ಲ!*

## ಕೃತಜ್ಞತೆ ಮತ್ತು ಸಂತೃಪ್ತಿ

ದೀನತೆಯ ತಾಯಿಯು ಕೃತಜ್ಞತೆಯಾಗಿದೆ. ದಿನವೆಲ್ಲಾ ನಿಮ್ಮ ಮಾರ್ಗಕ್ಕಾಗಿ ಪ್ರಾರ್ಥಿಸಿರಿ. ದಿನವೆಲ್ಲಾ ನಿಮ್ಮ ಮಾರ್ಗಕ್ಕಾಗಿ ಸ್ತೋತ್ರ ಮಾಡಿರಿ. ನಿಮ್ಮ ಆಶೀರ್ವಾದಗಳನ್ನು ಎಣಿಸಿರಿ. ನಮಗೆ ಅನುದಿನವೂ ದೇವರಿಂದ "ಅಗಣಿತ" ಆಶೀರ್ವಾದಗಳು ಇರುತ್ತವೆ: ಉಸಿರಾಡಲು, ಜೀವಿಸಲು ಮತ್ತು ಅನುಭವಿಸಲು. ದೇವರನ್ನು ತಿಳಿಯುವುದು ದೇವರಿಗೆ ಕೃತಜ್ಞತೆ ಸಲ್ಲಿಸುವುದಾಗಿದೆ. ದೇವರನ್ನು ಆರಾಧಿಸುವುದು ದೇವರಿಗೆ ಕೃತಜ್ಞತೆ ಸಲ್ಲಿಸುವುದಾಗಿದೆ. ಕೃತಜ್ಞತೆಯು ವಿಶ್ವದ ಬರೆದಿಡದ ನಿಯಮವಾಗಿದೆ. ದೇವರಿಗೆ ಅನುದಿನವೂ ಉಪಕಾರ ಹೇಳಿರಿ. ಯಾವುದನ್ನಾದರೂ ಇಪ್ಪತ್ತೊಂದು ದಿನ ಒಂದು ಸಾಲಿನಲ್ಲಿ ಮಾಡುವುದು ಒಂದು ರೂಢಿಯಾಗುತ್ತದೆ. ಕೃತಜ್ಞರಾಗಿರುವದನ್ನು ನಮ್ಮ ರೂಢಿಯನ್ನಾಗಿ, ನಿಮ್ಮ ಸ್ವಭಾವವನ್ನಾಗಿ ಮಾಡಿರಿ. ಏನೇ ಸಂಭವಿಸಿದರೂ ಕೃತಜ್ಞತೆಯುಳ್ಳವರಾಗಿರ್ರಿ (1 ಥೆಸಲೊನೀಕ 5:18). ದೇವರು ನಮ್ಮಿಂದ ಏನನ್ನು ಬಯಸುತ್ತಾನೆ? "ನಿನಗೆ ಉಪಕಾರ!" ಎಂದು ನಾವು ಹೇಳುವದನ್ನು ಕೇಳಲು ಆತನು ಬಯಸುತ್ತಾನೆ? ಭಿಕ್ಷುಕರು ಇನ್ನು ಹೆಚ್ಚಿನ ಯಾವುದನ್ನು ಹೇಳಬಲ್ಲರು?

ಅನುದಿನದ ನಡೆಯು ದೇವರ ಸನ್ನಿಧಿಯಲ್ಲಿ ಪೂರ್ಣವಾಗಿ ಮತ್ತು ಆನಂದದಿಂದ ಜೀವಿಸುವುದಾಗಿದೆ. ತೃಪ್ತಿಯಿಂದ ಇರುವದರಲ್ಲಿ ನಮ್ಮಲ್ಲಿ ಹೆಚ್ಚಾದವರು ಸೋತು

ಹೋಗುತ್ತೇವೆ, ಆದರೆ ಪೌಲನು ಸೋತು ಹೋಗಲಿಲ್ಲ. ಒಳ್ಳೇ ಸಮಯಗಳಲ್ಲಿ ಮತ್ತು ಕೆಟ್ಟ ಸಮಯಗಳಲ್ಲಿ ತೃಪ್ತಿಯಿಂದಿರುವದನ್ನು ಕಲಿತುಕೊಂಡನು (ಫಿಲಿಪ್ಪಿ 4:11-13). ನನ್ನ ಅನುಭವದಲ್ಲಿ ಸಮೃದ್ಧಿಗಿಂತ ಹೆಚ್ಚಾಗಿ ವಿಪತ್ತನ್ನು ಸಹಿಸಿಕೊಳ್ಳಬಹುದು. ಕೆಲವು ಜನರು ಮಾತ್ರವೇ ಯಶಸ್ಸನ್ನು, ಹಣವನ್ನು ಮತ್ತು ಬಲವನ್ನು ನಿರ್ವಹಿಸಬಲ್ಲರು. ಒಬ್ಬ ಬಡ ಸ್ನೇಹಿತನು ಬೇಗನೇ ಐಶ್ವರ್ಯವಂತನಾದನು. ಅವನು ತನ್ನ ಜೀವನ ಶೈಲಿಯನ್ನು ಬದಲಾಯಿಸಿದ್ದಲ್ಲದೇ, ತನ್ನ ಮನಸ್ಸನ್ನೂ ಹಾಳುಮಾಡಿಕೊಂಡನು. “ನೀನು ಬಡವನಾಗಿದ್ದಾಗ ನಾನು ಹೆಚ್ಚಾಗಿ ಮೆಚ್ಚಿಕೊಂಡಿದ್ದೆನು” ಎಂದು ಕಣ್ಣೀರಿನಿಂದ ಅವನಿಗೆ ಹೇಳಿದನು. ಸಂತೃಪ್ತಿಯು ನಾವು ಯಾರು (ಯಾರವರು) ಆಗಿದ್ದೇವೆಂಬುದಾಗಿದೆ, ನಮಗೆ ಏನು ಇರುವುದು ಎಂಬುದಲ್ಲ, ಸಂತೃಪ್ತಿಯು ಇರುವುದಾಗಿದೆ. ಹೊಂದಿಕೊಂಡಿರುವುದು ಆಗಿರುವದಿಲ್ಲ. (12ನೆಯ ಅಧ್ಯಾಯದಲ್ಲಿ ಹೆಚ್ಚಿನದು ಇರುತ್ತದೆ.)

◇◇◇◇◇◇◇◇

# ದೀನತೆ + ಅಧೀನತೆ = ವಿಧೇಯ ಸೇವಕರು (ಭಾಗ 2)

## ಯಾಕೋಬ 4:6-10

*“ಕ್ರಿಸ್ತನಿಗೆ ಭಯಪಡುವವರಾಗಿದ್ದು ಒಬ್ಬರಿಗೊಬ್ಬರು ವಿನಯವುಳ್ಳವರಾಗಿ ನಡೆದುಕೊಳ್ಳಿರಿ. ಸ್ತ್ರೀಯರೇ, ನೀವು ಕರ್ತನಿಗೆ ಹೇಗೋ ಹಾಗೆಯೇ ನಿಮ್ಮನಿಮ್ಮ ಗಂಡಂದಿರಿಗೆ ಅಧೀನರಾಗಿರಿ” (ಎಫೆಸ 5:21, 22).*

ಒಬ್ಬ ಕ್ರೈಸ್ತನ ನಡೆ ಮತ್ತು ಮಾತು ಒಂದಾಗಿ ಹೋಗತಕ್ಕದ್ದು. 1998ರಲ್ಲಿ ದಕ್ಷಿಣದ ಬಾಪ್ಟಿಸ್ಟರು ತಮ್ಮ ರಾಷ್ಟ್ರೀಯ ಸಮ್ಮೇಳನವನ್ನು ಉತಾದ ಸಾಲ್ಟಲೇಕ ಸಿಟಿಯಲ್ಲಿ ಏರ್ಪಡಿಸಿದ್ದರು. ಅವರು ಎಂದಾದರೂ ಸುದ್ದಿಯನ್ನು ಮಾಡಿದರೋ! ಅವರು “ಬಾಗಿಲು ತಟ್ಟಿದರೋ”! ಸಾಲ್ಟ್ ಲೇಕ್ ಸಿಟಿಯು ಮೋರ್ಮೋನ್ಸ್‌ರ ಮನೆಯಾಗಿತ್ತು. ಬಾಗಿಲು ತಟ್ಟಲು ಅವರು ಪ್ರಸಿದ್ಧರಾಗಿದ್ದರು! ಈ ಸಲ ಅವರ ಬಾಗಿಲುಗಳು ತಟ್ಟಲ್ಪಟ್ಟವು! ಅವರು ಆಘಾತಗೊಂಡರು. ಇದು ಕೇವಲ ಹಾಸ್ಯಕರವಾದ ಭಾಗವಾಗಿತ್ತು. ಅಲ್ಲಿ ಹೆಚ್ಚಾದದ್ದು ಇತ್ತು; ಸದರ್ನ ಬಾಪ್ಟಿಸ್ಟರು ತಮ್ಮ ಬೈಬಲುಗಳನ್ನು ತೆರೆದು “ಅಧೀನತೆಯನ್ನು” ಓದಲು ಮತ್ತು ಪ್ರಸಂಗಿಸಲು ಧೈರ್ಯಗೊಂಡರು. ಉದಾರ ಮಾಧ್ಯಮವು ಉನ್ನತ ವಾಯಿತು. ಅದು ಲೋಕದ ಅಂತ್ಯವೆಂದು ನೀವು ಯೋಚಿಸಿರಬಹುದು. ಸದರ್ನ ಬಾಪ್ಟಿಸ್ಟರು ಅಕ್ಷರಶಃವಾಗಿ “ರಂಗದಿಂದ ತಿರಸ್ಕರಿಸಲ್ಪಟ್ಟಂಥವರು” ಆದರು, ಅವರು ನಿಂದಿಸಲ್ಪಟ್ಟರು, ಬಾಯಿಮಾತಿನಿಂದ ಶಿಲುಬೆಗೆ ಹಾಕಲ್ಪಟ್ಟರು. ಸಹನೆಯನ್ನು ಹೆಚ್ಚಾಗಿ ಸಾರುತ್ತಿದ್ದವರು ಅತೀ ಹೆಚ್ಚಾಗಿ ಸಹನೆಯಿಲ್ಲದವರಾದರು. *ಅಧೀನತೆ!* ಅದು ಅಷ್ಟು ಸರಳವಾದ ಚಿಕ್ಕ ಪದವಾಗಿತ್ತು. ಅದನ್ನು ಹೇಳಿದಾಗ ಬಂದ ಪ್ರತಿಕ್ರಿಯೆ ಯಾವುದು?

ತಿರಸ್ಕಾರ, ವಿರೋಧ, ನಿಮ್ಮ ಮುಖದ ಎದುರಿನಲ್ಲಿ ಬಿಗಿದ ಮುಷ್ಠಿಯು ಅಲ್ಲಾಡಿಸಲ್ಪಟ್ಟದ್ದು. ಮಾತನ್ನು ಹೇಳುವುದು ತಕ್ಷಣದ ಯುದ್ಧವಾಗಿತ್ತು. ಪದವು ಅರ್ಥವುಳ್ಳದ್ದಾಗಿತ್ತೋ? *ಹೌದು!* ಪದವು ಬೈಬಲಿನದಾಗಿತ್ತೋ? *ಹೌದು!*

ಈ ಯಥಾರ್ಥವಾದ ಚಿಕ್ಕ ಪದವು, ಇತರ ಯಾವುದಕ್ಕಿಂತ ಹೆಚ್ಚಾಗಿ, ನಮ್ಮ ಸಮಾಜದ ಸ್ವಾರ್ಥತೆಯನ್ನು ನಾಟಕೀಯತೆಯನ್ನಾಗಿ ಮಾಡುತ್ತದೆ. ಧರ್ಮವನ್ನು ಪ್ರತಿಪಾದಿಸುವವರು ಮತ್ತು ಧರ್ಮವನ್ನು ತಿರಸ್ಕರಿಸುವವರು ಇಬ್ಬರಿಗೂ ಇದು ಸತ್ಯವಾದದ್ದಾಗಿರುತ್ತದೆ. ನಮ್ಮ ಎರಡನೆಯ ಪಾಠವನ್ನು ಹಿಂದಿರುಗಿ ಯೋಚಿಸೋಣ: "ದೀನತೆ + ಅಧೀನತೆ = ವಿಧೇಯ ಸೇವಕರು." ದೀನತೆಗೆ ನಮ್ಮ ಹೃದಯಗಳಲ್ಲಿ ಬೆಚ್ಚಗಿನ ಸ್ಥಾನವಿರುತ್ತದೆ. ಅಧೀನತೆಯು ನಮ್ಮ ರಕ್ತವು ತಣ್ಣಗಾಗುವಂತೆ ಮಾಡುವುದು. ಅಧೀನತೆಯು "ರಾಜಕೀಯವಾಗಿ ಸರಿಯಾದದ್ದು" ಆಗಿರುವದಿಲ್ಲ. ನಾವು ದೀನತೆಯನ್ನು ಮೆಚ್ಚಿಕೊಳ್ಳುತ್ತೇವೆ; ನಾವು ಅಧೀನತೆಯನ್ನು ಮೆಚ್ಚಿಕೊಳ್ಳು ವದಿಲ್ಲ. ಹೀಗಿದ್ದರೂ, ದೀನತೆಯ ಮೇಲೆ ಬರೆದ ಅತೀ ಪ್ರಸಿದ್ಧವಾದ ಪುಸ್ತಕವು ಬರೆಯಲ್ಪಟ್ಟಿರುವದಿಲ್ಲ. ಅಧೀನತೆಯ ಬಗ್ಗೆ ಒಂದು ಪುಸ್ತಕವನ್ನಾದರೂ ನಾನು ನೋಡಿ ರುವದಿಲ್ಲ. ನಮ್ಮ ಸರಣಿಯಲ್ಲಿ ಈ ಪಾಠವು ಮೂರನೆಯ ಪಾಠವಾಗಿರಬೇಕಿತ್ತು, ಆದರೆ "ಅಧೀನತೆ" ಎಂಬ ಪದವನ್ನು ಎದುರಿಸಿದಾಗ ಹೆಚ್ಚಾದವರು ಓದುವದನ್ನು ಇಲ್ಲವೇ ಕೇಳುವದನ್ನು ನಿಲ್ಲಿಸಿಬಿಡುತ್ತಿದ್ದರು. ಕನಿಷ್ಠ ಪಕ್ಷ ನೀವು ಅದನ್ನು ಯೋಚಿ ಸುವಷ್ಟು ಹನ್ನೊಂದು ಪಾಠಗಳಲ್ಲಿ ಸಾಕಷ್ಟು ಪ್ರೌಢಾವಸ್ಥೆಗೇರಿದ್ದೀರೆಂದು ನಿರೀಕ್ಷಿಸುತ್ತೇನೆ. ದೀನತೆಯು ಸಾಧನವಾಗಿದೆ, ಅಂತ್ಯವಾಗಿರುವದಿಲ್ಲ. ಒಪ್ಪಿಸಿಕೊಡುವದಕ್ಕಾಗಿ ನೀವು ತಗ್ಗಿಸಲ್ಪಡುವಿರಿ. ದೀನತೆ ಮತ್ತು ಅಧೀನತೆ ಸೇವಕರುಗಳನ್ನು ಉತ್ಪಾದಿಸುತ್ತದೆ! "ಕ್ರೈಸ್ತತ್ವವು ನಾಲ್ಕು ಪದಗಳಲ್ಲಿ ಸಂಕ್ಷೇಪಿಸಲ್ಪಡಬಹುದು. ಒಪ್ಪಿಕೊಳ್ಳುವುದು, ಅಧೀನನಾಗುವುದು, ಒಪ್ಪಿಸಿಕೊಳ್ಳುವುದು ಮತ್ತು ರವಾನಿಸು."[2] ಎಂದು ವಿಲ್ಬರ್ ಫೋರ್ಸ್ ಹೇಳಿದ್ದಾನೆ. ಎಲ್ಲರೂ ಸಮರ್ಪಣೆಯ ಬೆಲೆಯನ್ನು ಗ್ರಹಿಸಿಕೊಳ್ಳಬೇಕು, ಆದರೆ ಒಬ್ಬನು ಸಮರ್ಪಿಸುವದಕ್ಕೆ *ಒಪ್ಪಿಸಿಕೊಳ್ಳತಕ್ಕದ್ದು*! ಅಧೀನರಾಗುವದನ್ನು ನೀವು ತಿರಸ್ಕರಿಸುವಾಗ, ನೀವು ಸಮರ್ಪಣೆಯನ್ನು ಹಾಳು ಮಾಡುವಿರಿ. ನಮ್ಮ "ಜನರ ಸಮಸ್ಯೆಯು" ಒಪ್ಪಿಸಿಕೊಡುವಿಕೆಯ ಸಮಸ್ಯೆಯಾಗಿದೆ. ಜೀವನದಲ್ಲಿ ನಿರ್ಣಾಯಕ ಪಾಠವು ಅಧೀನತೆಯಾಗಿದೆ. ಆರಾಧನೆಯು ಅಧೀನತೆ ಆಗಿಯೇ ಇರುತ್ತದೆ.

## ಅಧೀನತೆ ಮತ್ತು ತ್ರೈಯೇಕತ್ವ

ಮನುಷ್ಯನು ದೇವರ ಸ್ವರೂಪದಲ್ಲಿ ಉಂಟು ಮಾಡಲ್ಪಟ್ಟನು (ಆದಿಕಾಂಡ 1:26, 27). ನಾವು ದೇವರಂತೆ ಇರಬೇಕು, ಯೇಸುವಿನಂತಿರಬೇಕು. ಬೈಬಲು ದೇವರನ್ನು "ದೇವತ್ವದಂತೆ," ಇಲ್ಲವೇ ತ್ರೈಯೇಕತ್ವದಂತೆ ಪ್ರಕಟಿಸುತ್ತದೆ. ತಂದೆಯು ದೇವರಾಗಿದ್ದಾನೆ; ಕುಮಾರನು ದೇವರಾಗಿದ್ದಾನೆ; ಆತ್ಮನು ದೇವರಾಗಿದ್ದಾನೆ. ಅವರು ಸಮನಾಗಿ ದೇವರಾಗಿದ್ದಾನೆ. ಅಧೀನತೆದೆ ಶ್ರೇಷ್ಠತೆಗೆ ಇಲ್ಲವೇ ಕನಿಷ್ಠತೆಗೆ ಯಾವ ಸಂಬಂಧವಿಲ್ಲ, ಆದಾಗ್ಯೂ ತ್ರೈಯೇಕತ್ವವು ಭಿನ್ನವಾದ ಪಾತ್ರಗಳನ್ನು ಮತ್ತು ಹುದ್ದೆಯನ್ನು ಪ್ರಕಟಿಸುತ್ತದೆ. ತ್ರೈಯೇಕತ್ವಕ್ಕೆ ಬೀಗದ ಕೈಯು ಅಧೀನತೆಯಾಗಿದೆ. ತ್ರೈಯೇಕತ್ವದಲ್ಲಿರುವ ಐಕ್ಯತೆಯಂತೆ ನಮ್ಮ ಐಕ್ಯತೆಗಾಗಿ ಯೇಸುವು ಪ್ರಾರ್ಥಿಸಿದನು (ಯೋಹಾನ 17:20-24). ಅಧೀನತೆಯನ್ನು ನಾವು ತಿರಸ್ಕರಿಸುವದರಿಂದ ನಾವು ಐಕ್ಯತೆಯಲ್ಲಿ ಸೋತು ಹೋಗುವೆವು. ಅಧೀನತೆಯಿಲ್ಲದೆ ಇರುವ ಐಕ್ಯತೆಯು ನಟನೆಯಾಗಿದೆ. ತ್ರೈಯೇಕತ್ವದ ಸ್ವಭಾವವೇ ಅಧೀನತೆಯಾಗಿದೆ. ಅಧೀನತೆಯು ಬೈಬಲಿನ ಅಸ್ತಿವಾರದ ತತ್ವವಾಗಿದೆ.

ಕುಮಾರನು ಅಧೀನನಾದನು. "ಕ್ರಿಸ್ತನ ಶಿರಸ್ಸು ದೇವರು." ಕುಮಾರನು ತಂದೆಯ ಅಧೀನತೆಯಲ್ಲಿರುವನು! ಸಮಾನರ ಮಧ್ಯದಲ್ಲಿ ಅಧೀನತೆ ಅಸ್ತಿತ್ವಲ್ಲಿರುವುದು. ಕುಮಾರನು ತಂದೆಯ ಚಿತ್ತವನ್ನು ಮಾಡುವದಕ್ಕಾಗಿ ಬಂದನು. ರಕ್ತದ ಹನಿಗಳಂತೆ ಬೆವರು ಸುರಿಸುತ್ತಾ ತೋಟದಲ್ಲಿ ಕುಮಾರನು ಪ್ರಾರ್ಥಿಸಿದನು. "ನಿನ್ನ ಚಿತ್ತವಾಗಲಿ" (ಮತ್ತಾಯ 26:39ಬಿ). ಯೇಸುವು ಮಹಿಮೆಪಡಿಸಲ್ಪಡುವದಕ್ಕಿಂತ ಮೊದಲು ಅಧೀನನಾಗಬೇಕಿತ್ತು (ಫಿಲಿಪ್ಪಿ 2:5-11). ಶಿಲುಬೆಯ ಅತಿ ದೊಡ್ಡ ಪ್ರದರ್ಶನ ವಾಗಿದೆ. ಯೇಸುವಿಗೆ ಒಂದು ಶಿಲುಬೆಯಿತ್ತು; ನನಗೆ ಒಂದು ಶಿಲುಬೆಯಿದೆ. ಆತನು ತನ್ನ ಶಿಲುಬೆಯನ್ನು ಹೊರಬೇಕಾಗಿತ್ತು; ನಾನು ನನ್ನ ಶಿಲುಬೆಯನ್ನು ಹೊರಬೇಕು. ಪೌಲನು ಪರಿಪೂರ್ಣವಾದ, ನಿತ್ಯವಾದ ಹೇಳಿಕೆಯನ್ನು ಕೊಟ್ಟನು: "ಆದರೂ ಒಂದು ಸಂಗತಿಯನ್ನು ನೀವು ತಿಳಿಯಬೇಕೆಂದು ನನ್ನ ಇಷ್ಟ; ಅದೇನಂದರೆ ಪ್ರತಿ ಪುರುಷನಿಗೂ ಕ್ರಿಸ್ತನು ತಲೆ, ಸ್ತ್ರೀಗೆ ಪುರುಷನು ತಲೆ, ಕ್ರಿಸ್ತನಿಗೆ ದೇವರು ತಲೆ ಆಗಿದ್ದಾನೆ" (1 ಕೊರಿಂಥ 11:3). ನಾವು ಇದನ್ನು ಸ್ವೀಕರಿಸತಕ್ಕದ್ದು.

ಆತ್ಮನು ಅಧೀನನಾದನು. "ದೃಶ್ಯದ ಹಿಂದಿರುವಂತೆ" ತ್ರೈಯೇಕತ್ವದ ಸದಸ್ಯನಾಗಿ, ಆತನ ಪಾತ್ರವು "ಅನಾಮಧೇಯತ್ವವಾಗಿರುವುದು." ಯೇಸುವು ಆತ್ಮನನ್ನು ನಮಗೆ "ಕಳುಹಿಸಿದನು" (ಯೋಹಾನ 14:16, 26; 16:7-15). ಯೇಸುವಿನಿಂದ ಅಪೊಸ್ತಲರಿಗೆ ಕೊಡಲ್ಪಟ್ಟ ಎಲ್ಲಾ ವಾಗ್ದಾನಗಳು ಆತ್ಮನಲ್ಲಿ ನೆರವೇರಿದವು. ಆತ್ಮನ ಪಾತ್ರವು ಕುಮಾರನನ್ನು ಮಹಿಮೆಪಡಿಸುವದಾಗಿತ್ತು. ಆತನ ಮೇಲೆ ಕೇಂದ್ರೀಕರಣವಿರು ವಾಗ ಆತನು ಸೋತುಹೋಗುತ್ತಾನೆ. ಆತ್ಮನು ಇಂದು ತನ್ನ ಮೇಲೆ ಮಾಡಲ್ಪಡುತ್ತಿರುವ ಗೊಂದಲದಿಂದ ನಾಚಿಕೆಪಡಿಸಲ್ಪಟ್ಟಿದ್ದಾನೆ. ಆತ್ಮನ ಮೇಲೆ ಕೇಂದ್ರೀಕರಿಸಿ, ಕುಮಾರನಿಂದ ದೂರ ಮಾಡುವ ಯಾವುದೇ ಬೋಧನೆಯು ದೇವದೂಷಣೆಯಾಗಿದೆ.

ತಂದೆಯು ಅಧೀನನಾದನು. ಪರಲೋಕದಲ್ಲಿ ಭೂಲೋಕದಲ್ಲಿ ಇರುವ ಎಲ್ಲಾ ಅಧಿಕಾರವನ್ನು ಆತನು ಕುಮಾರನಿಗೆ ಕೊಟ್ಟನು (ಮತ್ತಾಯ 28:18). ಸಭೆಯ ಎಲ್ಲಾ ಸಂಗತಿಗಳ ಮೇಲೆ ತಂದೆಯು ಯೇಸುವನ್ನು ಶಿರಸ್ಸಾನ್ನಾಗಿ ಮಾಡಿದನು (ಎಫೆಸ 1:19-23). ಕುಮಾರನು ದೇವರ ಬಲಗಡೆಯಲ್ಲಿ ಆಳುತ್ತಾನೆ (ಇಬ್ರಿಯ 1:3; 1 ಪೇತ್ರ 3:22; ಅಪೊಸ್ತಲರ ಕೃತ್ಯಗಳು 2:34-36; ಇಬ್ರಿಯ 12:2; ಕೊಲೊಸ್ಸೆ 3:1). ಭೂಲೋಕದ ಮಾತಿನಲ್ಲಿ ತಂದೆಯು "ವ್ಯವಹಾರವನ್ನು ಕುಮಾರನ ಕಡೆಗೆ ತಿರುಗಿಸಿದನು." ಮರಣವನ್ನು ಜಯಿಸಿದಾಗ, ಯೇಸುವು ರಾಜ್ಯವನ್ನು ತಂದೆಗೆ ಹಿಂದಿರುಗಿಸುವನು (1 ಕೊರಿಂಥ 15:24-26). "ರಾಜ್ಯ" ಎಂಬ ಪದವು ಅಧೀನತೆಯನ್ನು ಕೇಳುತ್ತದೆ. ತ್ರೈಯೇಕತ್ವವು ಅಧೀನತೆಯಲ್ಲಿ ಅಸ್ತಿತ್ವದಲ್ಲಿರುತ್ತದೆ.

## ಅಧೀನತೆ ಮತ್ತು ಜೀವನ

ಜೀವನಕ್ಕೆ ಬೀಗದಕೈ ಅಧೀನತೆ, *ಅವಧಿ*! (1) ನಾವೆಲ್ಲರೂ ಯಾವುದಕ್ಕಾದರೂ ಅಧೀನರಾಗುತ್ತೇವೆ. ನಾವು ಅದನ್ನು ತಿಳಿಯದೇ ಇರಬಹುದು; ಅದನ್ನು ಒಪ್ಪಿಕೊಳ್ಳು ವದನ್ನು ನಾವು ನಿರಾಕರಿಸಬಹುದು. ಜನರು ತಮ್ಮ ಪಾದಗಳ ಮೇಲೆ ಇರುವಂತೆ ಮಾಡಲು, ನಾವು ಅವರನ್ನು ಅವರ ಮೊಣಕಾಲುಗಳ ಮೇಲೆ ಇರುವಂತೆ ಮಾಡ ಬೇಕು. "ಆದುದರಿಂದ ದೇವರಿಗೆ ಅಧೀನರಾಗಿರಿ" ಎಂದು ಯಾಕೋಬನು ಹೇಳಿದನು (ಯಾಕೋಬ 4:7). ಮನುಷ್ಯನು ತನ್ನ ಯಜಮಾನನನ್ನು ಆಯ್ದುಕೊಳ್ಳಲು ಸ್ವತಂತ್ರನಾಗಿದ್ದಾನೆ. ನಾವು ದೇವರನ್ನಾಗಲೀ ಇಲ್ಲವೇ ಸೈತಾನನನ್ನಾಗಲೀ, ಕ್ರಿಸ್ತನನ್ನಾಗಲೀ ಇಲ್ಲವೇ, ಸ್ವಾರ್ಥವನ್ನಾಗಲೀ ಆಯ್ಕೆ ಮಾಡಿಕೊಳ್ಳಬಹುದು. ನಮ್ಮ

ಆಯ್ಕೆಗೆ ಪರಿಣಾಮಗಳಿರುತ್ತವೆ - ಆಶೀರ್ವಾದಗಳು ಇಲ್ಲವೇ ಶಾಪಗಳು. ಒಬ್ಬ ಪ್ರಸಿದ್ಧ ಮನುಷ್ಯನು ಅತಿಯಾದ ಮಧ್ಯಪಾನದಿಂದ, ಮರಣಹೊಂದಿದಾಗ ನಾವು ಆಘಾತಕ್ಕೊಳಪಡುತ್ತೇವೆ. ಅವನು ಮಧ್ಯಪಾನಕ್ಕೆ ಅಧೀನನಾಗಿದ್ದುದರಿಂದ ಇದು ಸಂಭವಿಸುತ್ತದೆ. ನಾವು ಹಣಕ್ಕೆ, ಲೈಂಗಿಕತೆಗೆ, ಗರ್ವಕ್ಕೆ, ರಾಜಕೀಯ ಶಿಕ್ಷೆಗೆ, ಕೆಲಸಕ್ಕೆ, ಹವ್ಯಾಸಗಳಿಗೆ, ಮೂರ್ಖತೆಗೆ ಇಲ್ಲವೇ ನೀತಿಗೆ ಅಧೀನರಾಗಬಹುದು. ಆಧೀನತೆಯಬಗ್ಗೆ ಭಯಪಡಬೇಕಾಗಿಲ್ಲ; ಅದು ನಮ್ಮ ಅತಿದೊಡ್ಡ ಆಶೀರ್ವಾದವಾಗಬಹುದು. ಅಧೀನತೆಯು ಬಿಡುಗಡೆ ಮಾಡಬಹುದು ಇಲ್ಲವೇ ಗುಲಾಮರನ್ನಾಗಿ ಮಾಡಬಹುದು. ಅಧೀನತೆಯು ಬುದ್ಧಿವಂತಿಕೆಯಾಗಿರಬಹುದು ಇಲ್ಲವೇ ಹುಚ್ಚುತನವಾಗಿರಬಹುದು.

(2) ನೀನು ಯಾವುದಾದರೊಂದಕ್ಕೆ ಒಪ್ಪಿಸಿಕೊಡುವಾಗ, ಇತರ ಸಂಗತಿಗಳನ್ನು ನೀನು ತಿರಸ್ಕರಿಸುವಿ. ನೀನು ಒಬ್ಬಂಟಿಗನಾಗಿರಲು ಆಯ್ಕೆ ಮಾಡಿಕೊಂಡರೆ, ನೀನು ವಿವಾಹವಾಗಲಾರಿ. ನೀನು ಮದುವೆಗೆ ನಿನ್ನನ್ನು ಸಮರ್ಪಿಸಿಕೊಡುವಾಗ, ಒಬ್ಬಂಟಿಗನಾಗಿರುವದನ್ನು ಬಿಟ್ಟುಕೊಡುತ್ತೀ. ಒಪ್ಪಿಸಿಕೊಡುವದಕ್ಕೆ ಯುವಜನರಿಗೆ ಕಾರಣವನ್ನು ನಾವು ಕೊಡದೇ ಇದ್ದುದರಿಂದ ಹಿಂಸೆಯು ಸಂಭವಿಸುತ್ತದೆ. ಒಬ್ಬನು ತನ್ನನ್ನು ಯಾರಾದರೊಬ್ಬನಿಗೆ ಇಲ್ಲವೇ ಯಾವುದಾದರೊಂದಕ್ಕೆ ತನ್ನನ್ನು ಅಧೀನಮಾಡಿಕೊಳ್ಳದಿದ್ದರೆ ಯಾವನೂ ನೆರವೇರಲಾರನು. ಇದು "ರಾಜಕೀಯವಾಗಿ ಸರಿಯಾದದ್ದಾಗಿರುವದಿಲ್ಲ," ಆದರೆ ಇದು ಬೈಬಲಿಗನುಗುಣವಾಗಿ ಸರಿಯಾಗಿರುತ್ತದೆ. ಆಧೀನತೆಯನ್ನು ಬಿಟ್ಟು ಯಾವುದೇ ಉತ್ತರವು ಯೇಸುವಿಗೆ ಯೋಗ್ಯವಾಗಿರುವದಿಲ್ಲ. ಯಾವುದೇ ಮನುಷ್ಯನು ಅಕ್ಷರಶಃವಾಗಿ ಸ್ವತಂತ್ರನಾಗಿರುವದಿಲ್ಲ.

(3) ಸಮಾಜವು ಅಧೀನತೆಯನ್ನು ಕೇಳುತ್ತದೆ. ರಸ್ತೆಯ ಬಲಗಡೆಯಲ್ಲಿ ಯಾಕೆ ವಾಹನ ನಡಿಸುತ್ತೀರಿ ಇಲ್ಲವೇ ಸಂಚಾರದ ಕೆಂಪು ದೀಪಗಳಿಗೆ ಯಾಕೆ ವಾಹನ ನಿಲ್ಲಿಸುತ್ತಿರಿ? ಸಮಾಜಕ್ಕೆ ಹಕ್ಕುಗಳಿವೆ. ಸಮಾಜದ ಹಕ್ಕುಗಳು ಒಬ್ಬ ವ್ಯಕ್ತಿಯ ಹಕ್ಕುಗಳನ್ನು ರದ್ದು ಪಡಿಸುತ್ತವೆ. ಇದು ನಮ್ಮ ಹಿಂಸೆಯನ್ನು ವಿವರಿಸುತ್ತದೆ. ಸಮಾಜವು ಹಡಗು ಒಡೆದಂತಾಗಿರಲು ನಾವು ವೈಯಕ್ತಿಕ ಹಕ್ಕುಗಳನ್ನು ನಾವು ಅಷ್ಟಾಗಿ ಪ್ರಚಾರ ಮಾಡಿದ್ದೇವೆ. ಪಂದ್ಯಾಟಗಳಲ್ಲಿ ಗುಂಪುಗಳಿರುತ್ತವೆ. ಆಟಗಾರರು ಗುಂಪಿಗೆ, ಕೋಚನಿಗೆ ಮತ್ತು ಆಟಗಳಿಗೆ ಒಪ್ಪಿಸತಕ್ಕದ್ದು. ಬಹಳ ವರಗಳುಳ್ಳ ಆಟಗಾರರು ಕೆಲವು ಸಲ ನಾಟಕೀಯವಾಗಿ ಸೋತುಹೋಗುವದನ್ನು ನೋಡುವಾಗ ನಮ್ಮ ಹೃದಯಗಳು ಮುರಿಯಲ್ಪಡುತ್ತವೆ. ಅವರು ಗುಂಪಾಗಿ ಆಡದಿರುವದೇ ಅದಕ್ಕೆ ಕಾರಣವಾಗುತ್ತದೆ. ದೊಡ್ಡ ಆಟಗಾರರ ಗುಂಪು ಆಟಗಾರರಾಗಿರುತ್ತಾರೆ.

ಆ ಕಾರಣದಿಂದ "isms"ಗಳು ತಪ್ಪಾದವುಗಳೂ ತೊಂದರೆದಾಯಕವಾದವುಗಳೂ ಆಗಿರುತ್ತವೆ. ಅಂಧದೇಶಾಭಿಮಾನವು ತಪ್ಪಾದದ್ದಾಗಿದೆ. ಜನಾಂಗಿಕ ಭಿನ್ನತೆಯು ತಪ್ಪಾದದ್ದಾಗಿದೆ. ಸ್ತ್ರೀ ಸಮತಾ ಚಳವಳಿಯು ತಪ್ಪಾದದ್ದಾಗಿದೆ. ತೀವ್ರವಾದಿ ಮಹಿಳಾ ಸಮತಾವಾದಿಗಳು ದೇವರನ್ನು, ಪುರುಷನನ್ನು, ಧರ್ಮವನ್ನು, ಮಹಿಳೆಯರನ್ನು, ಮದುವೆಯನ್ನು ಮತ್ತು ಮಕ್ಕಳನ್ನು ದ್ವೇಷಿಸುತ್ತಾರೆ. ಅವರ ಕೋಪವು ಭಯಪಡಿಸುವಂಥದ್ದಾಗಿದೆ. ಅವರಿಗೆ ಬಿಡುಗಡೆಯಿದೆ ಎಂಬುದು ಅವರನ್ನು ಗುಲಾಮರನ್ನಾಗಿ ಮಾಡಿದೆ. ಮಹಿಳೆಯರಿಗೆ ದೇವರು ಕೊಟ್ಟ ಅತಿದೊಡ್ಡ ಆಶೀರ್ವಾದವು ತಾಯ್ತನವಾಗಿದೆ, ಆದಾಗ್ಯೂ ಮಹಿಳೆಯರು ಅದಕ್ಕೆ ಅಧೀನರಾಗಬೇಕು. ಮಹಿಳಾ ಸಮತಾವಾದಿಗಳು ಮಹಿಳೆಯಾಗಿರುವಂಥ ಆನಂದವನ್ನು ಕಳೆದುಕೊಂಡಿದ್ದಾರೆ. ನನ್ನ ಅಮೂಲ್ಯವಾದ ತಾಯಿಯು ಮಹಿಳಾ ಸಮತಾವಾದಿಯಾಗಿರಲಿಲ್ಲವೆಂಬುದರಿಂದ ನಾನು ಬಹಳವಾಗಿ ಆಶೀರ್ವದಿಸಲ್ಪಟ್ಟಿದ್ದೇನೆ!

(4) ಸರ್ವಸಮತಾವಾದತ್ವವು ಕಾರ್ಯಮಾಡುವದಿಲ್ಲ! ಇದು ನಾವೆಲ್ಲರೂ

ಸಮಾನವಾಗಿ ಅಧಿಕಾರದಲ್ಲಿರುವೆವೆಂಬ ವಿಚಾರವಾಗಿದೆ. ಮನೆತನದ ವ್ಯವಸ್ಥೆಯಲ್ಲಿ ಮಕ್ಕಳು ತಮ್ಮ ತಂದೆತಾಯಿಗಳೊಂದಿಗೆ ಸಮಾನವಾಗಿರಬಾರದು. "ಒಂದು ಅಡಿಗೆ ಮನೆಯ ನಿಯಂತ್ರಣದಲ್ಲಿ ಇಬ್ಬರು ಅಡಿಗೆಯವರು ನಿಮಗಿರಬಾರದು" ಎಂದು ಮಕ್ಕಳು ಕಲಿಸಲ್ಪಡತಕ್ಕದ್ದು. ಇಬ್ಬರು ಒಂದು ಕುದುರೆಯ ಮೇಲೆ ಸವಾರಿ ಮಾಡುವಾಗ, ಒಬ್ಬನು ಇನ್ನೊಬ್ಬನ ಮೇಲೆ ಕೂತುಕೊಳ್ಳುತ್ತಾನೆ. ಕಡಿವಾಣಗಳ ನಿಯಂತ್ರಣದಲ್ಲಿ ಒಬ್ಬನು ಮಾತ್ರ ಇರುತ್ತಾನೆ! ಪ್ರಾರಂಭದಿಂದ, ಯಾರಾದರೂ ಒಬ್ಬರು ಅಧಿಕಾರದಲ್ಲಿ ಇರುವಂತೆ ದೇವರು ನೇಮಿಸಿದ್ದಾನೆ, ಜೀವನದ ಅಸ್ತಿವಾರದ ನಿಯಮವು ಜವಾಬ್ದಾರಿಕೆಯಾಗಿರುತ್ತದೆ. ವಾಯುಮಾನದಲ್ಲಿ "ವಿಮಾನ ಚಾಲಕನು ಅಧಿಕಾರದಲ್ಲಿ" ಇರುತ್ತಾನೆ; ಅವನು ಜವಾಬ್ದಾರನಾಗಿರುತ್ತಾನೆ. ಅವನು ನಿಯಂತ್ರಣದಲ್ಲಿಟ್ಟುಕೊಂಡಿರುತ್ತಾನೆ. ವಿಮಾನದ ಯಜಮಾನನು ಮತ್ತು ಟಿಕೇಟು ಹೊಂದಿದವನು ವಿಮಾನವನ್ನು ಅವನಿಗೆ ಒಪ್ಪಿಸಿರುತ್ತಾರೆ. ಯು.ಎಸ್. ಪ್ರೆಸಿಡೆಂಟನು *Air Force One*ದಲ್ಲಿ ಯಾನಮಾಡುತ್ತಾನೆ. ಅವನು ವಿಮಾನದಲ್ಲಿ ಕಾಲಿಡುವಾಗ, ಆಯಾನಕ್ಕೆ ಸಂಬಂಧಿಸಿ ಯಾವುದೇ ವಿಷಯಕ್ಕೆ ವಿಮಾನ ನಡಿಸುವವನಿಗೆ ಒಪ್ಪಿಸಿಕೊಡುತ್ತಾನೆ. ನಾಯಕರು ನಿಯೋಜಿಸತಕ್ಕದ್ದು; ಆದರೆ ಅವರು ನಿಯೋಜಿಸುವಾಗ, ಅವರು ಅಧೀನರಾಗತಕ್ಕದ್ದು! ಒಪ್ಪಿಸಿಕೊಡುವಿಕೆಯು ನಾಯಕತ್ವದ ಸಮಸ್ಯೆಯಾಗಿರುತ್ತದೆ. "ನಿಯೋಗಿಸಲಾರದವನು ತಾನು ಆಳಿಕೆ ಮಾಡುವದಕ್ಕೆ ಮಿತಿಯುಳ್ಳವನಾಗಿರುತ್ತಾನೆ." ಅಧೀನತೆಯು ಸ್ವೇಚ್ಛೆಯದಾಗಿರುವುದು; ಅದು ನಿರ್ಬಂಧನೆಯಾಗಿರುವದಿಲ್ಲ. ಅಧೀನತೆಯು ಬಲವುಳ್ಳವರಿಗಾಗಿರುವುದು, ಬಲಹೀನರಿಗಾಗಿರುವದಿಲ್ಲ. ಅಧೀನತೆಯು ಜವಾಬ್ದಾರಿಕೆಯನ್ನು ತಪ್ಪಿಸಿಕೊಳ್ಳುವದಾಗಿರಲಿಲ್ಲ.

(5) ಎಫೆಸ 5:21, 22ರಲ್ಲಿ "ಅಧೀನತೆಗಾಗಿ" ಪದವು ಮಿಲಿಟರಿ ಮಾತಾಗಿರುತ್ತದೆ. "ಬೂಟ ಕ್ಯಾಂಪಿನಲ್ಲಿ" ಸೈನ್ಯದ ಕವಾಯತಿನಲ್ಲಿ ಅಧೀನತೆಯು ಬೋಧಿಸಲ್ಪಡುತ್ತದೆ. ಅಧಿಕಾರವು ನಿರ್ಣಾಯಕವಾದದ್ದಾಗಿದೆ. ಅಧಿಕಾರಕ್ಕಾಗಿ ಗೌರವವು ನಿರ್ಣಾಯಕವಾದದ್ದಾಗಿದೆ. ದೇವರಿಗೆ, ಸಭೆಗೆ, ಸರಕಾರಕ್ಕೆ, ನಿಯಮಕ್ಕೆ, ಸಮಾಜಕ್ಕೆ, ತಂದೆ ತಾಯಿಗಳಿಗೆ, ಬೋಧಕರುಗಳಿಗೆ, ಪ್ರಾಯಸ್ಥರಿಗೆ - ಹೌದು, ಎಲ್ಲರಿಗೆ ನಾವು ಅಧೀನರಾಗುತ್ತೇವೆ! ನಾವೆಲ್ಲರೂ ಹುದ್ದೆಯ ಕೆಳಗಿರುತ್ತೇವೆ. ಸಮಾಜವು ಇದನ್ನು ಕಲಿತುಕೊಂಡರೆ, ನಮ್ಮ ಶಾಲೆಗಳೂ ಸಹ ಸುರಕ್ಷಿತವಾಗಿರುವವು. ಅಧೀನತೆಯಿಲ್ಲದೇ ಸೈನ್ಯವಿರಲಾರದು.

## ಅಧೀನತೆ ಮತ್ತು ಮದುವೆ

ಆತ್ಮಿಕ ನಾಯಕತ್ವದಲ್ಲಿ ಮನುಷ್ಯನ ಮನೆಯನ್ನು (ಮತ್ತು ಸಮಾಜವನ್ನು) ನಡಿಸಬೇಕೆಂದು ದೇವರು ನೇಮಕ ಮಾಡಿದ್ದಾನೆ. ದೇವರ ಶಿಕ್ಷಣ ಪದ್ಧತಿಯು ಒಂದೇ ಪದದಲ್ಲಿ ಸಂಕ್ಷೇಪಿಸಲ್ಪಡಬಹುದು: "ಮನುಷ್ಯ." "ತಂದೆಗಳೇ ನಿಮ್ಮ ಮಕ್ಕಳಿಗೆ ಕೋಪವನ್ನೆಬ್ಬಿಸಬೇಡಿರಿ" (ಎಫೆಸ 6:4ಎ). ತಂದೆಯು ತನ್ನ ಕುಟುಂಬಕ್ಕಾಗಿ ದೇವರಿಗೆ ಹೊಣೆಗಾರನಾಗಿದ್ದಾನೆ. ಮದುವೆಯಲ್ಲಿ, "owner's manual"ಗೆ (ಬೈಬಲಿಗೆ) ತಿರುಗಿಕೊಳ್ಳೋಣ. ಆದಿಕಾಂಡ 1-3ರಲ್ಲಿ ಜೀವದ ಮತ್ತು ಕುಟುಂಬದ ಸೃಷ್ಟಿಯ ಬಗ್ಗೆ ಓದಿರಿ. ದೇವರು ಪುರುಷನನ್ನು ಮೊದಲು ಉಂಟುಮಾಡಿದನು. ಯಾಕೆ ಎಂಬುದನ್ನು ನಾವು ತಿಳಿದಿರುವದಿಲ್ಲ, ಆದರೆ ಆತನು ಹಾಗೆ ಮಾಡಿದನು. ದೇವರು ಸ್ತ್ರೀಯನ್ನು ಪುರುಷನಿಂದ ಮಾಡಿದನು. ದೇವರು ಪುರುಷನನ್ನು ಮತ್ತು ಸ್ತ್ರೀಯನ್ನು ತನ್ನೊಂದಿಗೆ ಇರಲು ಮತ್ತು ಜೀವಿಸಲು ಸೃಷ್ಟಿಸಿದನು. ಸ್ತ್ರೀಯು ಪುರುಷನಿಗಾಗಿ ಮಾಡಲ್ಪಟ್ಟಳು,

ಸ್ತ್ರೀಯು ಪುರುಷನಿಂದ ಮಾಡಲ್ಪಟ್ಟಳು, ಸ್ತ್ರೀಯು ಪುರುಷನ ಬಳಿಗೆ ತರಲ್ಪಟ್ಟಳು, ಸ್ತ್ರೀಯು ಪುರುಷನಿಂದ ಹೆಸರಿಡಲ್ಪಟ್ಟಳು. ಸ್ತ್ರೀಯು ಪುರುಷನನ್ನು ರೋಮಾಂಚನಗೊಳಿಸಿದಳು ಎಂಬುದನ್ನು ಆದಿಕಾಂಡ ಗ್ರಂಥವು ಪ್ರಕಟಿಸುತ್ತದೆ. ಪುರುಷನು ಮತ್ತು ಸ್ತ್ರೀಯು ಭೂಮಿಯ ಮೇಲೆ ಎರಡು *ಅತೀ ಭಿನ್ನವಾದ* ಜೀವಿಗಳು. ದೇವರು ಮಾತ್ರವೇ ಇಬ್ಬರನ್ನು ತೆಗೆದುಕೊಂಡು ಒಂದಾಗಿ ಮಾಡಬಲ್ಲನು (ಆದಿಕಾಂಡ 2:24; ಮತ್ತಾಯ 19:5)! ಅಧೀನತೆಯಿಲ್ಲದೆ ಮದುವೆಯು ಯಶಸ್ವಿಯಾಗಲಾರದು (ಎಫೆಸ 5:22-33). ಯೇಸು ಸಭೆಗಾಗಿ ಸಾಯುವದರಿಂದ ಅದಕ್ಕೆ ಅಧೀನನಾದನು; ಸಭೆಯು ಕ್ರಿಸ್ತನಿಗೆ, ಶಿರಸ್ಸಿಗೆ ಅಧೀನವಾಗುತ್ತದೆ. ಗಂಡಂದಿರು ಕುಟುಂಬ ಜೀವನದ ಬೇಡಿಕೆಗಳಿಗೆ ಸಂಪೂರ್ಣವಾಗಿ ಸಮರ್ಪಿಸಿಕೊಳ್ಳುತ್ತಾರೆ. ಮದುವೆಯು ಪರಸ್ಪರ ಅಧೀನರಾಗುವಂಥದ್ದಾಗಿದೆ. ಪುರುಷರು ಮತ್ತು ಸ್ತ್ರೀಯರು ಪರಸ್ಪರರಿಗಾಗಿ ಮಾಡಲ್ಪಟ್ಟಿದ್ದಾರೆ. ಬೇರೆಯಾಗಿರುವದಕ್ಕಿಂತ ಹೆಚ್ಚಾಗಿ ಅವರು ಒಂದಾಗಿ ಚೆನ್ನಾಗಿ ಮಾಡಬಲ್ಲರು, ಪುರುಷರು ಪುರುಷರೊಂದಿಗೆ, ಇಲ್ಲವೇ ಸ್ತ್ರೀಯರು ಸ್ತ್ರೀಯರೊಂದಿಗೆ ಇರುವುದು ವಿಕೃತಿಯಾಗಿರುತ್ತದೆ.

"ನಿನಗಿಂತ ಹೆಚ್ಚಿನವಳನ್ನು ಮದುವೆಯಾಗು" ಎಂದು ನನ್ನ ತಂದೆ ನನಗೆ ಹೇಳಿದರು. ನಾನು ಹಾಗೆ ಮಾಡಿದೆನು. ನನ್ನ ಹೆಂಡತಿ, ಹೆಲೆನೆಳು, ನನಗಿಂತ ಹೆಚ್ಚು ಉತ್ತಮಳಾಗಿದ್ದಾಳೆ. ಆಕೆ ನನ್ನಿಂದ ಕಲಿಯುವದಕ್ಕಿಂತ ಹೆಚ್ಚಾಗಿ ಆಕೆಯಿಂದ ನಾನು ಕಲಿತುಕೊಂಡಿದ್ದೇನೆ. ನನ್ನ ಜೀವವನ್ನು, ನನ್ನ ಎಲ್ಲವನ್ನು ಆಕೆಗೆ ಕೊಡುವದಕ್ಕಾಗಿ ಒಂಟಿತನವನ್ನು ಬಿಟ್ಟುಕೊಟ್ಟೆನು. ತನ್ನ ಹೆಂಡತಿಯನ್ನು ಆಧಾರ ಪೀಠದ ಮೇಲೆ ಇಡಲಾರದ ಪುರುಷನ ಬಗ್ಗೆ ನಾನು ಕನಿಕರಪಡುತ್ತೇನೆ. ನಾವು ಸ್ತ್ರೀಯರಿಂದ ಬಹಳಷ್ಟನ್ನು ನಿರೀಕ್ಷಿಸುತ್ತೇವೆ. ದೊಡ್ಡ ಜೋಡಿಗಳು ಆನಂದದಿಂದ ಒಬ್ಬರಿಗೊಬ್ಬರು ಅಧೀನರಾಗುತ್ತಾರೆ. ಹಲೆನ್ ನನ್ನ ಹೆಸರನ್ನು ಒಪ್ಪಿಕೊಂಡಳು ಮತ್ತು ನಮ್ಮ ಮಕ್ಕಳಿಗೆ ಜನ್ಮ ಕೊಟ್ಟಳು. ಇನ್ನೂ ನಾನು ಜವಾಬ್ದಾರನಾಗಿರುವೆನು. ಆಕೆಗಾಗಿ, ನನ್ನ ಕುಟುಂಬಕ್ಕಾಗಿ ನಾನು ಸಾಯಲು ಸಿದ್ಧ. ನಾನು ಆತ್ಮಿಕವಾಗಿ ನಡಿಸುವೆನು, ಮತ್ತು ನಾನು ಮನೆಯ ಯಜಮಾನಾಗಿರುವೆನು. ಕ್ರಿಸ್ತನು ಸಭೆಯನ್ನು ಪ್ರೀತಿಸತಕ್ಕದ್ದು. ಹೇಗೆ *ಅಧೀನನಾಗ ಬೇಕು* ಮತ್ತು ಇತರರಿಗೆ *ಸೇವೆ ಮಾಡಬೇಕು* ಎಂಬುದನ್ನು ಕಲಿತು ಕೊಳ್ಳುವವರೆಗೆ ಯಾರೂ ಸ್ವತಂತ್ರನಾಗಿರುವದಿಲ್ಲ.

## ಅಧೀನತೆ ಮತ್ತು ಆನಂದ

ಯೇಸುವಿನಲ್ಲಿ ಯಾವುದೂ ಜಗತ್ತಿನಿಂದ ದೊಡ್ಡದೆಂದು ಯೋಚಿಸಲ್ಪಡಲಿಲ್ಲ. "... ಯೇಸುವು ... ತನ್ನ ಮುಂದೆ ಇಟ್ಟಿರುವ ಸಂತೋಷಕ್ಕಾಗಿ ಶಿಲುಬೆಯನ್ನು ಸಹಿಸಿಕೊಂಡನು" (ಇಬ್ರಿಯ 12:2ಎ). ಆನಂದ ಹಾಗೂ ಒಂದು ಶಿಲುಬೆ? ಆನಂದ ಮತ್ತು ಅಧೀನತೆ. ಮಿಶನರಿಗಳು ಹೇಗೆ ಅಷ್ಟು ಆನಂದದಿಂದ ಇದ್ದರು? ಕೊರತೆಯಲ್ಲಿರುವವರಿಗೆ ಸೇವೆ ಮಾಡುವ ಜನರಿಗೆ ಇಲ್ಲವೇ ವರ್ಷಗಳವರೆಗೆ ರೋಗಿ ಯಾದ ತಮ್ಮ ಜೊತೆಯವರ ಜೋಪಾಸನೆ ಮಾಡುವವರಿಗೆ ಹೇಗೆ ಆನಂದವು ಬರುವುದು? *ಅಧೀನತೆ!* ಒಂದು ಸಂಬಂಧಕ್ಕೆ ಸಂಪೂರ್ಣವಾಗಿ ಸಮರ್ಪಿಸಿಕೊಳ್ಳದೇ ಇರುವದರಿಂದ, ನೀವು ಅದನ್ನು ಹಾಳುಮಾಡುವಿರಿ. ಅಧೀನರಾಗುವವರು ಮಾತ್ರವೇ ಆನಂದದಲ್ಲಿ ಜೀವಿ ಸುವರು, ನೀನೆಂದೂ "ಆನಂದದಿಂದಿರುವ ಪತ್ನೀ ದಾಸನಾದ ಗಂಡನನ್ನು" ನೋಡಿ ರುವದಿಲ್ಲ, ಇಲ್ಲವೇ "ಆನಂದವುಳ್ಳ ಪತ್ನೀ ದಾಸನನ್ನು" ನೋಡಿರುವದಿಲ್ಲ. "ಅಧೀ ನನಾಗು ಮತ್ತು ಜೀವಿಸು!"

***ಬನ್ನಿರಿ, ನನ್ನೊಂದಿಗೆ ನಡೆಯಿರಿ.***

ಟಿಪ್ಪಣಿಗಳು

[1]Michael P. Green, ed., *Illustrations for Biblical Preaching* (Grand Rapids, Mich.: Baker Book House, 1989), 341. [2]Quoted in Frank S. Mead, ed. and comp., *The Encyclopedia of Religious Quotations* (Old Tappan, N.J.: Spire Books, Fleming H. Revell Co., 1965), 106.

© 2009 Truth for Today